## ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀ ಶಶೀಲ್ ಜಿ. ನಮೋಶಿ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 863

ಉತ್ತರಿಸಬೇಕಾದ ದಿನಾಂಕ : 09.03.2021

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿರುವ ಒಟ್ಟು ನಂದಿನಿ ಬೂತ್‌ಗಳ ಸಂಖ್ಯೆ ಎಷ್ಟು; ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿರುವ ಒಟ್ಟು ಬೂತ್‌ಗಳ ಸಂಖ್ಯೆ ಎಷ್ಟು; | ರಾಜ್ಯದಲ್ಲಿ ಒಟ್ಟು 1833 ನಂದಿನಿ ಬೂತ್‌ಗಳಿವೆ.<br>ನಗರ ಪ್ರದೇಶಗಳಲ್ಲಿ 1519 ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ 314 ಬೂತ್‌ಗಳಿರುತ್ತವೆ. |
| ಆ) | ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ನಂದಿನಿ ಪಾರ್ಲರ್ /ನಂದಿನಿ ಬೂತ್‌ಗಳ ಫ್ರಾಂಚೈಸಿಯನ್ನು ಪಡೆಯುವುದು ಹೇಗೆ; ಅದಕ್ಕೆ ಇರುವ ಮಾನದಂಡಗಳೇನು; ಫ್ರಾಂಚೈಸಿಯನ್ನು ಪಡೆಯುವವರಿಗೆ ಸಿಗುವ ಸೌಲಭ್ಯಗಳೇನು; | 1. ಜನಸಂಖ್ಯೆ ಹಾಗೂ ಬೇಡಿಕೆಗೆ ಅನುಗುಣವಾಗಿ ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ರಿಟೇಲ್ ದರದಲ್ಲಿ ಪೂರೈಸಲು ಕ್ರಮಕೈಗೊಳ್ಳಲಾಗುತ್ತಿದೆ.<br>2. ಸ್ಥಳೀಯ ಪ್ರದೇಶದಲ್ಲಿರುವ ನಂದಿನಿ ಹಾಲು ಮತ್ತು ಹಾಲಿನ ಉತ್ಪನ್ನ ಮಾರಾಟ ಮಾಡಲು ಆಸಕ್ತರನ್ನು ಗುರುತಿಸಲಾಗುವುದು, ಹಾಗೂ ಕೆಲವೊಮ್ಮೆ ನೇರವಾಗಿ ಆಸಕ್ತರು ಅರ್ಜಿಗಳನ್ನು ನೀಡಿದಲ್ಲಿ ಪರಿಶೀಲಿಸಿ ಅಗತ್ಯ ಕ್ರಮವಿಡಲಾಗುವುದು.<br>3. ಅರ್ಜಿದಾರರ ಮಾರಾಟ ಕೌಶಲ್ಯತೆ ಸ್ಥಳೀಯ ಜನಸಾಮಾನ್ಯರೊಂದಿಗೆ ಒಡನಾಟ ಹಾಗೂ ಬಂಡವಾಳವನ್ನು ಭರಿಸುವ ಸಾಮರ್ಥ್ಯಕ್ಕೆ ಅನುಗುಣವಾಗಿ ನೇಮಕ ಮಾಡಲಾಗುವುದು.<br>4. ಆಸಕ್ತರು ಆಯ್ದ ಸ್ಥಳಗಳಲ್ಲಿ ಬಂಡವಾಳ ಹೂಡಿ ಇತರೆ ಉತ್ಪನ್ನಗಳೊಂದಿಗೆ ನಂದಿನಿ ಉತ್ಪನ್ನಗಳನ್ನು ಮಾರಾಟ ಮಾಡಬೇಕಾಗುತ್ತದೆ.<br>5. ಪಾರ್ಲರ್/ಫ್ರಾಂಚೈಸಿಗಳಿಗೆ ಬ್ರಾಂಡಿಂಗ್‌ನ್ನು ಮಾಡಿಸುವುದು ಹಾಗೂ ರಿಯಾಯತಿ ದರದಲ್ಲಿ ಫ್ರೀಜರ್ ಮತ್ತು ಕೂಲರ್ ವ್ಯವಸ್ಥೆ ಹಾಲು ಒಕ್ಕೂಟಗಳು ಹಾಗೂ ಕೆ.ಎಂ.ಎಫ್ ಸಂಸ್ಥೆಯಿಂದ ಮಾಡಲಾಗುವುದು. |
| ಇ) | ಎಷ್ಟು ಕಿ.ಮೀ ಗೆ ಒಂದರಂತೆ ನಂದಿನಿ ಬೂತ್‌ಗಳನ್ನು ಸ್ಥಾಪಿಸಬಹುದು; ಇದಕ್ಕೆ ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿರುವ ಮಾನದಂಡಗಳೇನು? | ನಗರ ಪ್ರದೇಶಗಳಲ್ಲಿ ಒಂದು ಅಥವಾ ಎರಡು ಕಿ.ಮೀ.ಗೆ ಒಂದರಂತೆ ಆಯಾ ಸ್ಥಳದ ಬೇಡಿಕೆ ಮತ್ತು ಜನಸಂಖ್ಯೆ ಆಧಾರದ ಮೇಲೆ ಬೂತ್ ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುವುದು.<br>ಗ್ರಾಮೀಣ ಪ್ರದೇಶಗಳಲ್ಲಿ ಹಾಲು ಮತ್ತು ಹಾಲಿನ ಉತ್ಪನ್ನಗಳ ಮಾರಾಟಕ್ಕೆ ಬೇಡಿಕೆ/ಅವಕಾಶಗಳ ಅನುಸಾರವಾಗಿ ನಂದಿನಿ ಪಾರ್ಲರ್‌ಗಳನ್ನು ಸ್ಥಾಪಿಸಲು ಅವಕಾಶವಿದ್ದು, ಅಂತರವನ್ನು ನಿಗದಿಪಡಿಸಿರುವುದಿಲ್ಲ. |

ಕಡತ ಸಂಖ್ಯೆ: ಸಿಒ 47 ಸಿಸಿಬಿ 2021

(ಎಸ್. ಟಿ. ಸೋಮಶೇಖರ್)
ಸಹಕಾರ ಸಚಿವರು.